# ಸವಾಲು ಇರೋದೇ ಇಲ್ಲಿ



## ಶರಣಯ್ಯ

ಝೀ ಕನ್ನಡ 'ಡ್ರಾಮಾ ಜ್ಯೂನಿರ್ಸ್ 2' ನಿರ್ದೇಶಕ

- **ಮಕ್ಕಳ ಆಯ್ಕೆಯ ಮಾನದಂಡ ಏನು?**

ಮಕ್ಕಳ ವೈಯಕ್ತಿಕ ಪ್ರತಿಭೆ ಮಾತ್ರ ಮಾನದಂಡವಾಗುತ್ತದೆ. ನಾಲ್ಕರಿಂದ ಹದಿಮೂರು ವರ್ಷದ ಮಕ್ಕಳಿಗೆ ಅಭಿನಯ ಮಾಡುವ ಆಸೆ ಇರಬೇಕು. ಅವರಿಗೆ ಡಾನ್ಸ್ ಸ್ವಲ್ಪ ಗೊತ್ತಿರಬೇಕು. 'ಹೀಗೆ ನಟಿಸು' ಎಂದು ಹೇಳಿದರೆ ಅದನ್ನು ತೋರಿಸಬೇಕು. ಈಗಾಗಲೇ ಆಡಿಷನ್ ನಡೆಸಲಾಗುತ್ತಿದೆ. ಮಂಗಳೂರು ಮತ್ತು ಶಿವಮೊಗ್ಗದಲ್ಲಿ ಆಡಿಷನ್ ಮಾಡಿದ್ದೇವೆ. ಮೇ.20 ವಿಜಾಪುರ, 21 ಹುಬ್ಬಳ್ಳಿ, ಜೂನ್ 3 ರಾಯಚೂರು, 4 ಚಿತ್ರದುರ್ಗ, 10 ಮೈಸೂರು, 11ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಈ ಸಂಬಂಧ ನಮ್ಮ ವಾಹಿನಿಯಲ್ಲಿ ಜಾಹೀರಾತನ್ನು ನೀಡಲಾಗುತ್ತಿದೆ. ಹೆಚ್ಚಿನ ವಿವರಕ್ಕೆ 7406064444 ಸಂಪರ್ಕಿಸಬಹುದು. ಪೋಷಕರು ಮತ್ತು ಮಕ್ಕಳು ಇಬ್ಬರಿಗೂ ಆಸಕ್ತಿ ಬೇಕಾಗುತ್ತದೆ.

- **ರಿಯಾಲಿಟಿ ಶೋಗಳ ಹಿಂದೆ ನೀವು ಬಿದ್ದಿದ್ದು ಹೇಗೆ?**

ನನ್ನ ಊರು ಮಾನ್ವಿಯ ಕವಿತಾಳ್. ಅಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಆಗ ಹಲವಾರು ನಾಟಕ ಕಂಪೆನಿಗಳು ನಮ್ಮೂರಿನಲ್ಲಿ ಬಿಡಾರ ಹೂಡುತ್ತವೆ. ಬಾಲ್ಯದಲ್ಲಿ ಸಾಕಷ್ಟು ನಾಟಕಗಳನ್ನು ನೋಡಿದೆ. ಮೈಸೂರಿಗೆ 9ನೇ ತರಗತಿಗೆ ಓದಲು ಬಂದೆ. ಸಂಬಂಧಿಕರ ಮನೆಗಿಂತ ಪ್ರತ್ಯೇಕ ಇರುವುದು ವಾಸಿ ಎಂದು 'ಸಂಸ್ಕೃತ ಪಾಠ ಶಾಲೆ'ಯಲ್ಲಿ ವಸತಿ ಪಡೆದೆ. ಒಮ್ಮೆ ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದ್ದನ್ನು ನೋಡಿದ 'ನಿರಂತರ ಫೌಂಡೇಶನ್' ಕಡೆಯಿಂದ  ನೃತ್ಯ ರೂಪಕಕ್ಕೆ ಆಹ್ವಾನ ಬಂತು. ನಂತರ ನನಗೆ ಸಂಸ್ಕೃತ ಪಾಠ ಶಾಲೆಗಿಂತ ನಿರಂತರ ಇಷ್ಟ ಆಯಿತು. ಆಗಮ ಪ್ರವೃತ್ತಿ ಬಿಟ್ಟು, ನಾಟಕ ಪ್ರವೃತ್ತಿ ಹಿಡಿದೆ. ಇದು ನನ್ನದು ಎನಿಸಿತು, ಅದೇ ಕೈಯನ್ನೂ ಹಿಡಿಯಿತು. 'ಪೇಟೆ ಹುಡುಗರ ಹಳ್ಳಿ ಲೈಫ್' 'ಲೈಫ್ ಸೂಪರ್ ಗುರು' 'ವೀಕೆಂಡ್ ವಿಥ್ ರಮೇಶ್' 'ಡ್ರಾಮಾ ಜ್ಯೂನಿಯರ್ಸ್' 'ಕಾಮಿಡಿ ಕಿಲಾಡಿಗಳು' ಸೇರಿದಂತೆ ಹಲವು ರಿಯಾಲಿಟಿ ಶೋಗಳಲ್ಲಿ ಕೆಲಸ ಮಾಡಿದ್ದೇನೆ. ಧಾರಾವಾಹಿಗಳು ನನ್ನ ಜಾಯಮಾನಕ್ಕೆ ಒಗ್ಗುವುದಿಲ್ಲ. ರಿಯಾಲಿಟಿ ಶೋಗಳು ನಿತ್ಯವೂ ಹೊಸತನದ ಸವಾಲನ್ನು ಬಯಸುತ್ತವೆ. ಇದಕ್ಕೆ ಸಿದ್ಧ ಸೂತ್ರ ಇರುವುದಿಲ್ಲ. ಎಂದು ಇದನ್ನೇ ಮುಂದುವರಿಸುತ್ತಿದ್ದೇನೆ.

- **ರಿಯಾಲಿಟಿ ಶೋಗಳ ಕೆಲಸ ಹೇಗೆನಿಸುತ್ತದೆ?**

ಇಲ್ಲಿ ನಿತ್ಯ ಪ್ರಸವ ವೇದನೆಯನ್ನು ಅನುಭವಿಸಲೇಬೇಕಾಗುತ್ತದೆ. ಇಲ್ಲಿ ಸಿಗುವ ಕಿಕ್ ಮಜಾವೇ ಬೇರೆ. ಧಾರಾವಾಹಿಗಳಲ್ಲಿ ಇಂತಹ ಕಿಕ್ ಸಿಗುವುದಿಲ್ಲ. ಹತ್ತು ಹದಿನೈದು ಕ್ಯಾಮೆರಾಗಳಲ್ಲಿ ಕೆಲಸ ಮಾಡುವುದು ನನಗೆ ಇಷ್ಟ. ದೇಶ ಪರ್ಯಟನೆ ಮಾಡಲು ಇಲ್ಲಿ ಸಾಧ್ಯವಾಗಿದೆ. ಭಾರತದ ಬಹುತೇಕ ಕಾಡುಗಳಲ್ಲಿ ಹಗಲು ರಾತ್ರಿಗಳನ್ನು ಕಳೆದಿದ್ದೇನೆ. ಕೆಲಸ ಮಾಡುವಾಗ ಸ್ವಲ್ಪ ರಿಸ್ಕ್ ಅನ್ನಿಸಿದರೂ ಅದರ ಸಂತೋಷಕ್ಕೆ ಮಿತಿ ಇಲ್ಲ. ಹೊಸದಾಗಿ ಯೋಚಿಸಲು ಹೊಸ ಹೊಸ ಸಾಧ್ಯತೆಗಳನ್ನು ಪ್ರಯೋಗಿಸಲು ಇಲ್ಲಿ ಅವಕಾಶ ಹೆಚ್ಚಿದೆ.

- **ಡ್ರಾಮಾ ಜ್ಯೂನಿಯರ್ಸ್‌ಗೆ ಥೀಮ್ ಏನಾದರೂ ಇದೆಯಾ?**

ಏಕ ಮಾದರಿಯ ಥೀಮ್ ಇರುವುದಿಲ್ಲ. ಕಳೆದ ವರ್ಷ ಇದಕ್ಕೊಂದು ಸ್ವರೂಪ ಸಿಕ್ಕಿದೆ. 'ಜಲಗಾರ', 'ಶಿವರಾತ್ರಿ', 'ಶರಿಫ್' ಸೇರಿದಂತೆ ಹಲವು ವಿಷಯಗಳನ್ನು ಕರಿತು ನಾವು ನಾಟಕ ರೂಪಿಸಿದ್ದೆವು. ಇದೇ ಮಾದರಿಯನ್ನು ಈ ವರ್ಷವೂ ಪಾಲಿಸಿಕೊಂಡು ಹೋಗುತ್ತೇವೆ. ಇಲ್ಲಿ ಪುರಾಣ ಇರುತ್ತೆ, ಜನಪದ ಇರುತ್ತೆ, ಸಾಮಾಜಿಕ ಸಮಸ್ಯೆಗಳ ಜೊತೆಗೆ ಹಾಸ್ಯವೂ ಇರುತ್ತದೆ.

- **ಮಕ್ಕಳಿಗೆ ನಾಟಕವನ್ನು ಕಲಿಸುವ ಪರಿ ಹೇಳಿ..**

ಅನಿಲ್, ಮೂರ್ತಿ, ಮಾನಸ, ಡಾ.ಚಲುವರಾಜು, ಸಂದೀಪ್ ಈಶಾನ್ಯ ಅವರನ್ನು ಒಳಗೊಂಡ ತಂಡ ನಮ್ಮದು. ಪಾತ್ರ ಪೋಷಣೆ, ಪರಿಕರ, ಪ್ರಸಾದನ, ಬಟ್ಟೆ ಹೀಗೆ ಒಬ್ಬೊಬ್ಬರು ನಿರ್ದಿಷ್ಟ ಕೆಲಸವನ್ನು ಮಾಡುತ್ತೇವೆ. ಸಮಾಜಮುಖಿಯಾದ ವಿಷಯದ ಕುರಿತು ರೂಪಕಗಳನ್ನು ಕಲಿಸುತ್ತೇವೆ. ನಮ್ಮ ಪರಂಪರೆ, ಸಾಹಿತ್ಯ, ಸಂಸ್ಕೃತಿ, ಸಮಾಜವನ್ನು ಒಳಗೊಂಡ ವಿಷಯ–ವಸ್ತುವಿಗೆ ಒತ್ತುಕೊಟ್ಟಿರುತ್ತೇವೆ. ನಂತರ ಮಕ್ಕಳನ್ನು ಮೆಂಟರ್‌ಗೆ ವಹಿಸುತ್ತೇವೆ. ಕನ್ನಡ ಓದಲು ಕೆಲವು ಮಕ್ಕಳಿಗೆ ಬರುವುದಿಲ್ಲ. ಆರಂಭದಲ್ಲಿ ಸ್ವಲ್ಪ ಕಾಳಜಿ ತೆಗೆದುಕೊಂಡರೆ ಮುಗಿತು. ನಂತರ ಪುಟಗಟ್ಟಲೇ ಡೈಲಾಗ್‌ಗಳನ್ನು ಅವರೇ ಹೇಳುತ್ತಾರೆ. ಹಿಂದಿನ ವರ್ಷದ ಡ್ರಾಮಾ ಜ್ಯೂನಿಯರ್ಸ್ ಮಕ್ಕಳು ವೃತ್ತಿಪರ ನಟರನ್ನೇ ಬೆಚ್ಚಿ ಬೀಳಿಸಿದ್ದರು. ಅವರ ಶೈಕ್ಷಣಿಕ ಪ್ರಗತಿ ತುಂಬಾ ಚೆನ್ನಾಗಿದೆ.

■ ರಾಗು